(ವಾಲ್ಕೆನ್‌ಬರ್ಗ್: ಹುಚ್ಚಾಸ್ಪತ್ರೆಯ ಹೆಸರು. ಇನ್‌ಗ್ರಿಡ್ ಮತ್ತು ಅವಳ ತಾಯಿ ಶುಶ್ರೂಷೆ ಪಡೆದದ್ದು ಇಲ್ಲೇ. ಗೋರ್ಡನ್ ಬೀಚ್: ಇನ್‌ಗ್ರಿಡ್ ಮತ್ತು ಅವಳ ಅಕ್ಕ ಬಾಲ್ಯದ ದಿನಗಳನ್ನು ಸಂತೋಷದಲ್ಲಿ ಕಳೆದ ಕಡಲ ದಂಡೆ).

ಮನಸ್ಸಿನ ಆಲೋಚನೆಗಳ ಮೂಲಕ ದೇಹದ ನೋವುಗಳಿಂದ ಹೀಗೆ ಪಲಾಯನ ಮಾಡುತ್ತ ಸಾಗುವ ಈ ಕವಿತೆಯು, ಕಣ್ಣಿಗೆ ಕಟ್ಟುವ ಚಿತ್ರಗಳನ್ನು ನಮ್ಮ ಮುಂದೆ ಬರೆಯುತ್ತ ಹೋಗುತ್ತದೆ. ಆರಂಭದ 'ಪಲಾಯನ'ವು ಕವಿತೆಯ ಕಡೆಯ ಹೊತ್ತಿಗೆ 'ಬಿಡುಗಡೆ' ಪಡೆಯುವತ್ತ ತುಡಿಯುತ್ತದೆ. ಈ ಆರಂಭಿಕ ಕವಿತೆಯಲ್ಲೇ ತನ್ನ ಬದುಕಿನ ಕೊನೆಯ ಚಿತ್ರವನ್ನು ಬರೆದುಕೊಂಡ ಹಾಗೆ ಕಾಣಿಸುವ ಇನ್‌ಗ್ರಿಡ್‌ಗೆ ಕವಿತೆ ಬರೆಯುವುದು ಏಕಕಾಲಕ್ಕೆ ಪಲಾಯನವೂ, ಬಿಡುಗಡೆಯ ಮಾರ್ಗವೂ ಆಗಿದ್ದ ಹಾಗೆ ತೋರುತ್ತದೆ.

50ರ ದಶಕದಲ್ಲಿ ಬೊಹಿಮಿಯ ಗುಂಪಿನ ಕವಿಗಳು, ಲೇಖಕರ ಜೊತೆಗಿನ ಇನ್‌ಗ್ರಿಡ್‌ಳ ಒಡನಾಟ ಗಾಢವಾಗಿತ್ತು. **Sestigers** ಎಂದು ಕರೆದುಕೊಳ್ಳುತ್ತಿದ್ದ ಈ ಗುಂಪು ದ.ಆಫ್ರಿಕಾದಲ್ಲಿ 1960ರ ದಶಕದ ಪ್ರಮುಖ ಪ್ರಗತಿಪರ ಸಂಘಟನೆಯಾಗಿತ್ತು. ವರ್ಣಭೇದ ಸರ್ಕಾರದ ವಿರುದ್ಧ ಮಾತನಾಡಲು ಈ ಚಳವಳಿಯ ಬರಹಗಾರರು ಆಫ್ರಿಕಾನ್ಸ್ ಭಾಷೆಯನ್ನು ಬಳಸಿದರು, ಮತ್ತು ಆಫ್ರಿಕಾನ್ ಸಾಹಿತ್ಯದೊಳಗೆ ಸಮಕಾಲೀನ ಇಂಗ್ಲಿಷ್ ಮತ್ತು ಫ್ರೆಂಚ್ ಮಾದರಿಗಳನ್ನು ತರುವುದಕ್ಕೆ ಶ್ರಮಿಸಿದರು. ಈ ಗುಂಪಿನ ಸದಸ್ಯನಾಗಿದ್ದ ಪೀಟರ್ ವೆಂಟರ್‌ನನ್ನು ಇನ್‌ಗ್ರಿಡ್ ವಿವಾಹವಾದಳು. ಮರುವರ್ಷ ಇವರ ಮಗಳು ಸಿಮೋನ್ ಜನನವಾಯಿತು. ಸಾಮರಸ್ಯದ ಕೊರತೆಯ ಕಾರಣ ಪೀಟರ್ ಮತ್ತು ಇನ್‌ಗ್ರಿಡ್ ಸ್ವಲ್ಪ ದಿನಗಳಲ್ಲೆ ಬೇರೆಯಾದರು.

ದಕ್ಷಿಣ ಆಫ್ರಿಕಾ ರಾಷ್ಟ್ರೀಯ ಪಕ್ಷದ ಪಾರ್ಲಿಮೆಂಟ್ ಸದಸ್ಯನಾಗಿದ್ದ ಇನ್‌ಗ್ರಿಡ್‌ಳ ತಂದೆಯು, ಕಲೆ ಮತ್ತು ಪ್ರಕಾಶನಕ್ಕೆ ಸಂಬಂಧಿಸಿದ ಸೆನ್ಸಾರ್‌ಶಿಪ್ ಕಾನೂನು ಮಂಡಳಿಯ ನಿರ್ದೇಶಕನಾಗಿದ್ದ. ಈ ಸಮಿತಿಯ ಕಾನೂನುಗಳು ಮತ್ತು ಅದರ ರಾಜಕೀಯ ಹುನ್ನಾರವನ್ನು ಇನ್‌ಗ್ರಿಡ್ "ಬೇರೆಬೇರೆ ವೃತ್ತಿಗಳಲ್ಲಿ ತೊಡಗಿಕೊಂಡಿರುವ, 'ಆಲೋಚನೆ ಮಾಡುವ' ವ್ಯಕ್ತಿಗಳನ್ನು ಬಲಿಪಶುಗಳಾಗಿ ಮಾಡುವ, ಅವರನ್ನು ಹೆದರಿಸುವ ಪ್ರಯತ್ನಗಳು ಸತತವಾಗಿ ನಡೆಯುತ್ತಿವೆ. ಇದರ ಫಲವಾಗಿ ಸಾಹಿತಿಗಳಲ್ಲಿ ಆತಂಕ, ಹತಾಶೆ ಕಾಣಿಸಿಕೊಂಡಿದೆ. ಸೆನ್ಸಾರ್‌ಶಿಪ್ ಎನ್ನುವುದು ಅಪಾಯಕಾರಿ" ಎಂದು ಬರೆದು ಸಾರ್ವಜನಿಕವಾಗಿ ವಿರೋಧಿಸಿದ್ದು ತಂದೆಯನ್ನು ಮುಜುಗರಕ್ಕೀಡುಮಾಡಿತು. ಅಬ್ರಹಾಮ್ ಪಾರ್ಲಿಮೆಂಟ್ ಭಾಷಣವೊಂದರಲ್ಲಿ ಇನ್‌ಗ್ರಿಡ್ ತನ್ನ ಮಗಳಲ್ಲವೆಂದು ಘೋಷಿಸಿದ. ಈಗಾಗಲೇ ಪೀಟರ್ ವೆಂಟರ್‌ನಿಂದ ವಿಚ್ಛೇದನ ಪಡೆದಿದ್ದ ಯಾಂಕರ್, ಲೇಖಕ ಜಾಕ್ ಕೋಪ್‌ನೊಂದಿಗಿನ ಪ್ರೇಮಸಂಬಂಧದಿಂದ ಗರ್ಭಿಣಿಯಾಗಿದ್ದಳು. ಪ್ರೇಮಿಯ ಒತ್ತಡದಿಂದ, ಆ ಕಾಲಕ್ಕೆ ದಕ್ಷಿಣ ಆಫ್ರಿಕಾದಲ್ಲಿ ಅಪರಾಧವೆಂದು ಪರಿಗಣಿಸಲಾಗುತ್ತಿದ್ದರೂ ಗರ್ಭಪಾತಕ್ಕೆ ಮುಂದಾದಳು. ಇವೆಲ್ಲದರ ಫಲವಾಗಿ ಬಂದ ಮಾನಸಿಕ ಖಿನ್ನತೆಯು ಅವಳನ್ನು ವಾಲ್ಕೆನ್‌ಬರ್ಗ್‌ನ ಮಾನಸಿಕ ರೋಗಿಗಳ ಆಸ್ಪತ್ರೆಗೆ ಕಟ್ಟಿಹಾಕಿತು. ತಾಯಿ ಬಿಯಾಟ್ರಿಸ್ ಕೂಡ ಇದೇ ಆಸ್ಪತ್ರೆಯಲ್ಲಿ ಇನ್ನಿಲ್ಲದಂತೆ ನರಳಿದ್ದು, ಮತ್ತು ಅದು ಇನ್‌ಗ್ರಿಡ್ ಬದುಕನ್ನೂ ಹೊಕ್ಕು ಬೆಳೆದದ್ದು ಕಾಲದ ದುರಂತ.

ಹೇಗೋ ಈ ಎಲ್ಲದರಿಂದ ಪಾರಾಗಿ ಬಂದ ಇನ್‌ಗ್ರಿಡ್, ಉಳಿದಿದ್ದ ಚೈತನ್ಯವನ್ನು ಒಗ್ಗೂಡಿಸಿಕೊಂಡು ಬವಣೆ ಬಸಿದ ಕವಿತೆಗಳನ್ನು ಬರೆದಳು. 'ಸ್ಮೋಕ್ ಅಂಡ್ ಓಕರ್'(ಹೊಗೆ ಮತ್ತು ಕಂದುಮಣ್ಣು) ಎಂಬ ಶೀರ್ಷಿಕೆಯೊಂದಿಗೆ 1963ರಲ್ಲಿ ಪ್ರಕಟವಾದ ಆಫ್ರಿಕಾನ್ಸ್